# ನೇಮಕಾತಿ ಪ್ರಾಧಿಕಾರಿ ಹಾಗೂ ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು

ನಂ.8, ಎಂ.ಎಸ್.ಬಿ.-1 ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು-52, ದೂರವಾಣಿ ಸಂಖ್ಯೆ: 080-22265755,
ಇ-ಮೇಲ್: edkreis@rediff.com

## ನೇಮಕಾತಿ ಆದೇಶ

ವಿಷಯ: ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಪಿಟಿಷನ್/ರಿಟ್ ಅಪೀಲುಗಳ ತೀರ್ಪುಗಳಂತೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ, ಅಧೀನದ ವಸತಿ ಶಾಲೆಗಳಲ್ಲಿ ಹೊರಸಂಪನ್ಮೂಲದಿಂದ ನೇಮಕಗೊಂಡು ಕಾರ್ಯನಿರ್ವಹಿಸುತ್ತಿದ್ದ ಹಿಂದಿ ಭಾಷಾ ಸಹ ಶಿಕ್ಷಕರುಗಳಿಗೆ ಸೇವಾ ಕೃಪಾಂಕ ಪರಿಗಣಿಸಿ, ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಬಗ್ಗೆ.

ಉಲ್ಲೇಖ: 1. ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 20204-20364/2011 ಮತ್ತು ಇತರ ಸಂಯೋಜಿತ ಪ್ರಕರಣಗಳ ತೀರ್ಮಾನ ದಿ:13.07.2012.

2. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಮೇಲ್ಮನವಿ ಅರ್ಜಿ ಸಂಖ್ಯೆ: 5127/2012 ಮತ್ತು ಇತರೆ ಸಂಯೋಜಿತ ಪ್ರಕರಣಗಳ ತೀರ್ಮಾನ ದಿ:28.2.2013 ಮತ್ತು ರಿಟ್ ಅರ್ಜಿ ಸಂಖ್ಯೆ: 958-988/2015, ದಿ: 12/02/2015

3. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ, ಧಾರವಾಡ ಪೀಠದ ಮೇಲ್ಮನವಿ ಅರ್ಜಿ ಸಂಖ್ಯೆ: 31346/2012 ಮತ್ತು ಇತರ ಸಂಯೋಜಿತ ಪ್ರಕರಣಗಳ ತೀರ್ಮಾನ ದಿ: 21.3.2013.

4. ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 113076/2014 ಮತ್ತು ಸಂಯೋಜಿತ ರಿಟ್ ಅರ್ಜಿಗಳಾದ 100572/2015 ಮತ್ತು 100573-582/2015, ದಿ: 21.1.2015.

5. ಈ ಕಛೇರಿಯ ಆಯ್ಕೆಪಟ್ಟಿ ಪ್ರಕಟಣೆ ಸಂಖ್ಯೆ: ಕವಶಿಸಸ/ಆಡಳಿತ/ಹೊನೇ/ಸಿ.ಆರ್-01/2013-14, ದಿನಾಂಕ:19/10/2015

6. ಈ ಕಛೇರಿಯ ನೇಮಕಾತಿ ಆದೇಶದ ಸಮ ಸಂಖ್ಯೆ ದಿನಾಂಕ: 30/01/2016, 06/02/2016, 28/03/2016 ಮತ್ತು 21/06/2016

*****

ಪ್ರಸ್ತಾವನೆ:-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮತ್ತು ಉಲ್ಲೇಖ (1) ರಿಂದ (4)ರ ವರೆಗಿನ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯಗಳ ತೀರ್ಪುಗಳನ್ವಯ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು ಇದರ ಅಧೀನದಲ್ಲಿರುವ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ ಮಾದರಿ ವಸತಿ ಶಾಲೆಗಳಲ್ಲಿ ಹೊರಸಂಪನ್ಮೂಲ ಏಜೆನ್ಸಿವತಿಯಿಂದ/ಜಿಲ್ಲೆಗಳ ಜಿಲ್ಲಾ ಪಂಚಾಯಿತಿಗಳಿಂದ ತಾತ್ಕಾಲಿಕವಾಗಿ ನೇಮಕಗೊಂಡು ಕಾರ್ಯನಿರ್ವಹಿಸುತ್ತಿದ್ದ ಸಹ ಶಿಕ್ಷಕರುಗಳಿಗೆ ಸೇವಾ ಕೃಪಾಂಕ ನೀಡಿ, ಅರ್ಹರಾದ ಅಭ್ಯರ್ಥಿಗಳ ಆಯ್ಕೆಪಟ್ಟಿಯನ್ನು ಕೆಲವು ನಿಬಂಧನೆಗಳಿಗೆ ಒಳಪಟ್ಟು ಉಲ್ಲೇಖ (5) ರನ್ವಯ ಪ್ರಕಟಿಸಲಾಗಿತ್ತು. ಸದರಿ ಪ್ರಕಟಿತ ಆಯ್ಕೆಪಟ್ಟಿಯ ನಿಬಂಧನೆಗಳನುಸಾರ ಮೂಲದಾಖಲೆಗಳ

ಪರಿಶೀಲನೆ ನಡೆಸಿ, ಜಾತಿ ಸಿಂಧುತ್ವ ಪ್ರಮಾಣ ಪತ್ರ, ಪೋಲೀಸ ವರದಿ ಹಾಗೂ ವೈದ್ಯಕೀಯ ಪ್ರಮಾಣ ಪತ್ರಗಳು ಸ್ವೀಕೃತವಾಗಿದ್ದ ಅಭ್ಯರ್ಥಿಗಳಿಗೆ ಈ ಕಛೇರಿಯ ಉಲ್ಲೇಖ (6) ರಲ್ಲಿ ತಿಳಿಸಿರುವ ಆದೇಶಗಳಲ್ಲಿ ನೇಮಕಾತಿ ಆದೇಶ ನೀಡಲಾಗಿದೆ. ಆ ತರುವಾಯ ಇನ್ನುಳಿದ ಈ ಕೆಳಕಂಡ ಅಭ್ಯರ್ಥಿಗಳ ಜಾತಿ ಸಿಂಧುತ್ವ ಪ್ರಮಾಣಪತ್ರ, ಪೋಲೀಸ್ ವರದಿ ಮತ್ತು ವೈದ್ಯಕೀಯ ಪ್ರಮಾಣಪತ್ರಗಳು ಸ್ವೀಕೃತವಾಗಿದ್ದು, ಈ ಮುಂದೆ ತಿಳಿಸಿದ ನಿಬಂಧನೆಗೊಳಪಟ್ಟು ನೇಮಕಾತಿ ಆದೇಶ ನೀಡಿ ಸ್ಥಳನಿಯುಕ್ತಿಗೊಳಿಸಲು ಈ ಕೆಳಕಂಡ ಆದೇಶ.

::ಆದೇಶ::

ಸಂಖ್ಯೆ: ಕವಶಿಸಸ/ಆಡಳಿತ/ಹೊನೇ/ಸಿ.ಆರ್-01/2013-14 ದಿನಾಂಕ: 13/07/2016

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದ ರಿಟ್ ಪಿಟಿಷನ್/ರಿಟ್ ಅಪೀಲುಗಳ ತೀರ್ಪುಗಳಂತೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ, ಅಧೀನದ ವಸತಿ ಶಾಲೆಗಳಲ್ಲಿ ಹೊರಸಂಪನ್ಮೂಲದಿಂದ ನೇಮಕಗೊಂಡು ಕಾರ್ಯನಿರ್ವಹಿಸುತ್ತಿದ್ದ ಈ ಕೆಳಕಂಡ ಹಿಂದಿ ಭಾಷಾ ಸಹ ಶಿಕ್ಷಕರುಗಳಿಗೆ ಅವರ ಹೆಸರುಗಳ ಮುಂದೆ ಸೂಚಿಸಿರುವಂತೆ ತಕ್ಷಣದಿಂದಲೇ ಜಾರಿಗೆಬರುವಂತೆ ತಾತ್ಕಾಲಿಕವಾಗಿ ನೇಮಕಾತಿಮಾಡಿ, ಮುಂದಿನ ಆದೇಶವಾಗುವವರೆಗೆ ತಾತ್ಕಾಲಿಕವಾಗಿ ಸ್ಥಳನಿಯುಕ್ತಿಗೊಳಿಸಿ ಆದೇಶಿಸಲಾಗಿದೆ.

ಹಿಂದಿ ಭಾಷಾ ಶಿಕ್ಷಕರು, ವೇತನ ಶ್ರೇಣಿ (17,650-32,000)

| ಕ್ರ.ಸಂ. | ಅಭ್ಯರ್ಥಿಯ ಹೆಸರು ಮತ್ತು ವಿಳಾಸ | ಆಯ್ಕೆಯಾದ ಪ್ರವರ್ಗ | ತಾತ್ಕಾಲಿಕವಾಗಿ ಸ್ಥಳನಿಯುಕ್ತಿಗೊಳಿಸಿದ ಹುದ್ದೆ ಮತ್ತು ಸ್ಥಳ |
|---|---|---|---|
| 1 | **ರಾವ್ವಡಗಿ ನಿರ್ಮಲ**, ಬಿನ್ ಬಸವರಾಜ, ಬಸವೇಶ್ವರ ನಿಲಯ, ಬುಟ್ಟಿನವರ ಓಣಿ, ಸಂತೆ ಮೈದಾನ, ಉಣಕಲ್, ಹುಬ್ಬಳ್ಳಿ, ಧಾರವಾಡ ಜಿಲ್ಲೆ | 3-ಎ | **ಹಿಂದಿ ಭಾಷಾ ಶಿಕ್ಷಕರು,** ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ (ಪ.ಜಾ.), ಶಿಗ್ಗಾವಿ, ಹಾವೇರಿ ಜಿಲ್ಲೆ |
| 2 | **ಸುರೇಖಾ ಧೋರ್ತೆ**, ಬಿನ್ ಶಿವಶಂಕರಪ್ಪ, ಯಳಸಂಗಿ ಗ್ರಾಮ ಮತ್ತು ಅಂಚೆ, ಅಳಂದ ತಾಲ್ಲೂಕು, ಕಲಬುರಗಿ ಜಿಲ್ಲೆ | 3-ಎ | **ಹಿಂದಿ ಭಾಷಾ ಶಿಕ್ಷಕರು** ಮೊರಾರ್ಜಿ ದೇಸಾಯಿ ವಸತಿ ಶಾಲೆ (ಪ.ಜಾ.), ಹುಮ್ನಾಬಾದ್, ಬೀದರ್ ಜಿಲ್ಲೆ |
| 3 | **ತನುಶ್ರೀ ಸಿ.ಬಿ., ಬಿನ್ ಬಸವರಾಜು ಸಿ.ಪಿ.,** ಕೋಂ. ಶ್ರೀನಿವಾಸ ಡಿ.ಬಿ., ದಾಸನೂರು ಗ್ರಾಮ, ದೊಡ್ಡಕವಲಂದೆ ಹೋಬಳಿ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ | 3-ಎ | **ಹಿಂದಿ ಭಾಷಾ ಶಿಕ್ಷಕರು** ಮೊರಾರ್ಜಿ ದೇಸಾಯಿ ವಸತಿ ಶಾಲೆ (ಪ.ಜಾ.), ಹರವೆ, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ |
| 4 | **ಉಷಾ ಎನ್.ಎಂ.**, ಕೋಂ. ಶಿವಕುಮಾರ್, ತುರುವನೂರು ರಸ್ತೆ, ಚರ್ಚ್ ರಸ್ತೆ, ಮಂಜುನಾಥ ಫ್ಲೋರ್ ಮಿಲ್ ಹಿಂಭಾಗ, ಚಿತ್ರದುರ್ಗ | 3-ಬಿ | **ಹಿಂದಿ ಭಾಷಾ ಶಿಕ್ಷಕರು,** 615-ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ (ಪ.ಜಾ.), ಹಲವಾಗಿಲು, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ |
| 5 | **ಸುರೇಶ್ ಎಂ.ಆರ್.**, ಬಿನ್. ಲೇಟ್ ರಾಮಪ್ಪ ಎಂ.ಜಿ., ರಾಂಪುರ (ಪೋ) ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ | 3-ಬಿ | **ಹಿಂದಿ ಭಾಷಾ ಶಿಕ್ಷಕರು,** ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ (ಪ.ಜಾ.), ತಗಡೂರು, ಮೈಸೂರು ತಾಲ್ಲೂಕು ಮತ್ತು ಜಿಲ್ಲೆ |
| 6 | **ಸಂಗೀತಾ** ಬಿನ್ ಸಾಯಬಣ್ಣ ಜಾಲಗಾರ, ಮನೆ ನಂ.660 ಯು.ಕೆ.ಪಿ. ಕ್ಯಾಂಪ್, ಗೋಗಿ (ಕೆ), ಶಹಪುರ ತಾಲ್ಲೂಕು, ಯಾದಗಿರಿ ಜಿಲ್ಲೆ | ಪ್ರವರ್ಗ-1 | **ಹಿಂದಿ ಭಾಷಾ ಶಿಕ್ಷಕರು,** ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ (ಪ.ಜಾ.), ದೊಡ್ಡಹಳ್ಳಿ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ |
| 7 | **ಸುಮ ಎ.ಆರ್.**, ಬಿನ್ ರಂಗಪ್ಪ, ಶ್ರೀರಂಗನಾಥ ನಿಲಯ, ವಿಶ್ವೇಶ್ವರಯ್ಯ ಬಡಾವಣೆ, ಚಿತ್ರದುರ್ಗ | ಪ.ಜಾ. | **ಹಿಂದಿ ಭಾಷಾ ಶಿಕ್ಷಕರು** ಮೊರಾರ್ಜಿ ದೇಸಾಯಿ ವಸತಿ ಶಾಲೆ (ಪ.ಜಾ.), ಜಗಳೂರು, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ |

## ಈ ನೇಮಕಾತಿಯು ಕೆಳಕಾಣಿಸಿರುವ ಷರತ್ತುಗಳಿಗೆ ಒಳಪಟ್ಟಿರುತ್ತದೆ.

1. ನೇಮಕಾತಿಯಾದ ಅಭ್ಯರ್ಥಿಯು ಸ್ಥಳನಿಯುಕ್ತಿಗೊಳಿಸಿದ ಸ್ಥಳದಲ್ಲಿ ಆದೇಶ ತಲುಪಿದ 15 ದಿನಗಳೊಳಗಾಗಿ ಕರ್ತವ್ಯಕ್ಕೆ ಹಾಜರಾಗತಕ್ಕದ್ದು. ಇಲ್ಲವಾದಲ್ಲಿ ಈ ಆದೇಶ ತಂತಾನೇ ರದ್ದುಗೊಳ್ಳುತ್ತದೆ.
2. ಈ ನೇಮಕಾತಿ ಆದೇಶವು ಭವಿಷ್ಯದಲ್ಲಿ ಬರಬಹುದಾದ ಮಾನ್ಯ ಉಚ್ಛ ನ್ಯಾಯಾಲಯಗಳ ತೀರ್ಪುಗಳು ಹಾಗೂ ಸರ್ಕಾರದ ತೀರ್ಮಾನಗಳಿಗೊಳಪಟ್ಟಿರುತ್ತದೆ.
3. ಈ ನೇಮಕಾತಿ ಆದೇಶವು ಅಭ್ಯರ್ಥಿಗಳ ಶೈಕ್ಷಣಿಕ ಮೂಲದಾಖಲಾತಿಗಳ ನೈಜತೆ ಪರಿಶೀಲನೆ ಸಮಯದಲ್ಲಿ ವ್ಯತ್ಯಾಸ ಕಂಡುಬಂದಲ್ಲಿ; ಅಂತಹ ಅಭ್ಯರ್ಥಿಗಳ ಆಯ್ಕೆಯು ತಂತಾನೇ ರದ್ದುಗೊಳ್ಳುವುದಲ್ಲದೇ, ಅಂತಹ ಅಭ್ಯರ್ಥಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲಾಗುವುದು.
4. ಸೇವಾ ಕೃಪಾಂಕ ಪರಿಗಣನೆಗಾಗಿ ಅಭ್ಯರ್ಥಿಗಳು ಹೊರಸಂಪನ್ಮೂಲ ಏಜೆನ್ಸಿಯಿಂದ ಪಡೆದ ನೇಮಕಾತಿ ಆದೇಶ, ಶಾಲಾ ಹಾಜರಾತಿ ವಹಿ, ವೇತನ ಬಟವಾಡೆ ವಿವರಗಳು, ವಯೋಮಾನಕ್ಕೆ ಸಂಬಂಧಿಸಿದ ದಾಖಲೆಗಳು ಹಾಗೂ ಇನ್ನಿತರ ಸೇವಾ ದಾಖಲಾತಿಗಳು ಭವಿಷ್ಯದಲ್ಲಿ ನೈಜವಲ್ಲವೆಂದು ಕಂಡುಬಂದಲ್ಲಿ; ಅಂತಹ ಅಭ್ಯರ್ಥಿಗಳ ನೇಮಕಾತಿಯು ತಂತಾನೇ ರದ್ದುಗೊಳ್ಳುವುದಲ್ಲದೇ, ಅಂತಹ ಅಭ್ಯರ್ಥಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲಾಗುವುದು ಹಾಗೂ ಪಾವತಿಸಿದ ವೇತನವನ್ನು ವಸೂಲುಮಾಡಲಾಗುವುದು.
5. ಈ ಆಯ್ಕೆಪಟ್ಟಿಯು ಮಾನ್ಯ ಉಚ್ಛ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:104065-80/2015 (S-RES) ರ ಹಾಗೂ ಮಾನ್ಯ ಉಚ್ಛ ನ್ಯಾಯಾಲಯಗಳ ಇತರ ಯಾವುದೇ ಅಂತಿಮ ಆದೇಶಗಳಿಗೆ ಒಳಪಟ್ಟಿರುತ್ತದೆ.
6. ಈ ನೇಮಕಾತಿ ಆದೇಶವನ್ನು ಪಡೆಯುವ ಮೊದಲು ಅಭ್ಯರ್ಥಿಯು ತಾನು ಒದಗಿಸಿರುವ ಮಾಹಿತಿಗಳು ಸತ್ಯವೆಂದು Affidavit ಸಲ್ಲಿಸತಕ್ಕದ್ದು. ಒಂದು ವೇಳೆ ಒದಗಿಸಿದ ಮಾಹಿತಿಗಳು ಭವಿಷ್ಯದಲ್ಲಿ ಕೃತ್ರಿಮ ಅಥವಾ ತಪ್ಪು ಎಂದು ಕಂಡುಬಂದಲ್ಲಿ ಈ ನೇಮಕಾತಿಯು ತಂತಾನೇ ರದ್ದುಗೊಳ್ಳುವುದಲ್ಲದೇ, ಅಂತಹ ತಪ್ಪುಗಳಿಗೆ ಅಭ್ಯರ್ಥಿಯೇ ಸಂಪೂರ್ಣ ಹೊಣೆಗಾರರಾಗಿರುತ್ತಾರೆ.
7. ಸರ್ಕಾರದ ಆದೇಶ ಸಂಖ್ಯೆ: 3767 ಪಿ.ಟಿ.ಎನ್. ದಿನಾಂಕ: 20.07.1990 ರಂತೆ ಅಭ್ಯರ್ಥಿಯ ಪೂರ್ವ ನಡತೆ ತೃಪ್ತಿಕರವಾಗಿರತಕ್ಕದ್ದು ಹಾಗೂ ಆ ಬಗ್ಗೆ ಸನ್ನಡತೆಯ ಪ್ರಮಾಣ ಪತ್ರವನ್ನು ಪತ್ರಾಂಕಿತ ಅಧಿಕಾರಿಗಳಿಂದ ಪಡೆದು ಸಲ್ಲಿಸತಕ್ಕದ್ದು.
8. ಅಭ್ಯರ್ಥಿಯ ಆಯ್ಕೆಯು ಯಾವುದೇ ಲೋಪದೋಷಗಳಿಂದೊಡಗೂಡಿದೆ ಎಂದು ಮುಂಬರುವ ದಿನಗಳಲ್ಲಿ ಕಂಡುಬಂದಲ್ಲಿ; ಯಾವುದೇ ಮುನ್ಸೂಚನೆ ನೀಡದೇ ನೇಮಕಾತಿಯನ್ನು ರದ್ದುಪಡಿಸಲಾಗುವುದು.
9. ನಿಮಗೆ ಕೃಪಾಂಕವನ್ನು ನೀಡಿ ನೇಮಕಾತಿ ಮಾಡಿಕೊಳ್ಳುತ್ತಿರುವುದರಿಂದ, ಶೈಕ್ಷಣಿ ಗುಣಮಟ್ಟವನ್ನು ಕಾಯ್ದುಕೊಳ್ಳುವ ಉದ್ದೇಶದಿಂದ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ಏರ್ಪಡಿಸುವ Teachers Eligibility Test (TET) ಮಾದರಿಯ ಪರೀಕ್ಷೆಯಲ್ಲಿ ಉತ್ತೀರ್ಣರಾದ ನಂತರವೇ ನಿಮ್ಮ ಖಾಯಂ ಪೂರ್ವ ಅವಧಿಯನ್ನು ಘೋಷಿಸಲಾಗುವುದು.
10. ಅಭ್ಯರ್ಥಿಯು 2 ವರ್ಷಗಳ ಖಾಯಂಪೂರ್ವ ಅವಧಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸತಕ್ಕದ್ದು. ಈ ಖಾಯಂ ಪೂರ್ವ ಸೇವಾ ಅವಧಿಯು ಪೂರ್ಣಗೊಳ್ಳುವ ಒಳಗಾಗಿ ನಿಮ್ಮ ಹುದ್ದೆಗೆ ನಿಗದಿಪಡಿಸಿದ ಇಲಾಖಾ ಪರೀಕ್ಷೆಯನ್ನು ಕಡ್ಡಾಯವಾಗಿ ತೇರ್ಗಡೆಯಾಗತಕ್ಕದ್ದು.
11. ಅಭ್ಯರ್ಥಿಯು ಕರ್ತವ್ಯಕ್ಕೆ ಹಾಜರಾಗುವ ಸಂದರ್ಭದಲ್ಲಿ ಈ ಕೆಳಗೆ ಕಾಣಿಸಿರುವ ಎಲ್ಲಾ ಮೂಲ ದಾಖಲಾತಿಗಳನ್ನು ಹಾಗು ಅವುಗಳ ಎರಡು ಸೆಟ್ ಜೆರಾಕ್ಸ್ ಪ್ರತಿಗಳನ್ನು ಪ್ರಾಂಶುಪಾಲರಿಗೆ/ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕಛೇರಿಗೆ ಸಲ್ಲಿಸತಕ್ಕದ್ದು.
    ಅ). ವಿದ್ಯಾರ್ಹತೆ ಬಗ್ಗೆ ಎಲ್ಲಾ ಮೂಲ ದಾಖಲೆಗಳು (ಎಸ್.ಎಸ್.ಎಲ್.ಸಿ., ದ್ವಿತೀಯ ಪಿ.ಯು.ಸಿ., ಪದವಿ, ಬಿ.ಇಡಿ, ಸ್ನಾತಕೋತ್ತರ ಪದವಿ ಇತ್ಯಾದಿ)
    ಆ). ಜನ್ಮದಿನಾಂಕ ದೃಢಪಡಿಸುವ ಬಗ್ಗೆ ಅಧಿಕೃತ ದಾಖಲೆಗಳು (ಎಸ್.ಎಸ್.ಎಲ್.ಸಿ. ಅಂಕಪಟ್ಟಿ)
    ಇ). ಒಬ್ಬರಿಗಿಂತ ಹೆಚ್ಚು ಪತ್ನಿ/ಪತಿಯವರನ್ನು ಹೊಂದಿರುವುದಿಲ್ಲ ಎಂಬ ಬಗ್ಗೆ ಮುಚ್ಚಳಿಕೆ ಪತ್ರ ನೀಡುವುದು.

ನಿಮ್ಮನ್ನು ಕರ್ತವ್ಯಕ್ಕೆ ತೆಗೆದುಕೊಳ್ಳುವ ಮುಂಚೆ ಈ ಆದೇಶದಲ್ಲಿ ಪ್ರಸ್ತಾಪಿಸಿದ ಎಲ್ಲಾ ಷರತ್ತುಗಳನ್ನು ಗಮನಿಸಿ ಸರಿಯಾಗಿದ್ದಲ್ಲಿ ಮಾತ್ರ ಕರ್ತವ್ಯಕ್ಕೆ ತೆಗೆದುಕೊಳ್ಳಲಾಗುವುದು.

**ಸಂಬಂಧಿಸಿದ ಶಾಲಾ ಪ್ರಾಂಶುಪಾಲರಿಗೆ ಈ ಕೆಳಕಂಡ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಿದೆ.**

1. ಈ ನೇಮಕಾತಿ ಆದೇಶದ ಪ್ರಕಾರ ಅಭ್ಯರ್ಥಿಯಿಂದ ರೂ.100/- ಮೌಲ್ಯದ e-Stamp Paper ನಲ್ಲಿ ಅಫಿಡೆವಿಟ್ (ಅಫಿಡೆವಿಟ್‌ನಲ್ಲಿ ನಮೂದಿಸಬೇಕಾದ ಅಂಶಗಳ ನಮೂನೆಯನ್ನು ಇದರೊಂದಿಗೆ ಲಗತ್ತಿಸಿದೆ) ಪಡೆದುಕೊಂಡ ನಂತರವೇ ಕರ್ತವ್ಯಕ್ಕೆ ಹಾಜರುಮಾಡಿಕೊಳ್ಳತಕ್ಕದ್ದು ಹಾಗೂ ಕೆಲಸಕ್ಕೆ ಹಾಜರಾದ ದಿನಾಂಕವನ್ನು ಈ ಕಚೇರಿಗೆ ತಪ್ಪದೇ ವರದಿಮಾಡುವುದು. ಅಲ್ಲದೇ, ಸದರಿ ಅಭ್ಯರ್ಥಿಯು ಕರ್ತವ್ಯ ನಿರ್ವಹಿಸಿದ ಪ್ರಥಮ ಮಾಹೆಯ ವೇತನ ಪಡೆಯುವ ಮೊದಲು ಈ ಕಛೇರಿಯಿಂದ ಅನುಮತಿ ಪಡೆದು ನಂತರ ವೇತನ ಪಾವತಿ ಮಾಡತಕ್ಕದ್ದು.
2. ನೇಮಕಗೊಂಡ ಸಹ ಶಿಕ್ಷಕರುಗಳ ವಿದ್ಯಾರ್ಹತೆಗೆ ಸಂಬಂಧಪಟ್ಟ ದಾಖಲೆಗಳನ್ನು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಸಲ್ಲಿಸಿ, ಅವುಗಳ ನೈಜತೆಯ ಬಗ್ಗೆ ಪ್ರಮಾಣ ಪತ್ರಗಳನ್ನು ಪಡೆದುಕೊಳ್ಳತಕ್ಕದ್ದು.
3. ನೇಮಕಗೊಂಡ ಶಿಕ್ಷಕರು ಕರ್ತವ್ಯಕ್ಕೆ ವರದಿಮಾಡಿಕೊಂಡ ನಂತರ ಶಿಕ್ಷಕರುಗಳ ಸೇವಾ ಪುಸ್ತಕಗಳನ್ನು ಸಂಬಂಧಪಟ್ಟ ಪ್ರಾಂಶುಪಾಲರುಗಳು ತೆರೆದು ಎಲ್ಲಾ ದಾಖಲೆಗಳನ್ನು ನಮೂದಿಸಿ, ದೃಢೀಕರಿಸುವುದು.

ಈ ಆದೇಶದಲ್ಲಿರುವ ಎಲ್ಲಾ ಅಂಶಗಳನ್ನು ಸಂಬಂಧಪಟ್ಟ ಎಲ್ಲಾ ಅಭ್ಯರ್ಥಿಗಳು ಹಾಗು ಪ್ರಾಂಶುಪಾಲರು ಚಾಚುತಪ್ಪದೇ ಪಾಲಿಸುವುದು.

ಎಮ್.ಆರ್. ಹಿರೇಮಠ, ಕೆ.ಎ.ಎಸ್.
ಕಾರ್ಯನಿರ್ವಾಹಕ ನಿರ್ದೇಶಕರು,
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ,
ಬೆಂಗಳೂರು.

ಪ್ರತಿಯನ್ನು ಮಾಹಿತಿಗಾಗಿ:-

1. ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತಕಾರ್ಯದರ್ಶಿಯವರಿಗೆ.
2. ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ರವರಿಗೆ,
3. ಸರ್ಕಾರದ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ರವರಿಗೆ.
4. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ರವರಿಗೆ,
5. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ರವರಿಗೆ.
6. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ರವರಿಗೆ,
7. ಎಲ್ಲಾ ಜಂಟಿ ನಿರ್ದೇಶಕರು/ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ರವರಿಗೆ,
8. ಎಲ್ಲಾ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ರವರಿಗೆ
9. ಎಲ್ಲಾ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು/ಯೋಜನಾ ಸಮನ್ವಯಾಧಿಕಾರಿಗಳು ರವರಿಗೆ
10. ಸಂಬಂಧಪಟ್ಟ ವಸತಿ ಶಾಲೆಯ ಪ್ರಾಂಶುಪಾಲರು, ಮೊ.ದೇ.ವ.ಶಾ/ಕಿ.ರಾ.ಚೆ./ಏಕಲವ್ಯ/ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳು,
11. ಸಂಬಂಧಿಸಿದ ಅಭ್ಯರ್ಥಿಗಳಿಗೆ
12. ಕಛೇರಿ ಪ್ರತಿ.

ಎಮ್.ಆರ್. ಹಿರೇಮಠ, ಕೆ.ಎ.ಎಸ್.
ಕಾರ್ಯನಿರ್ವಾಹಕ ನಿರ್ದೇಶಕರು,
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು.